# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕೇಂದ್ರ ಸರ್ಕಾರದ ಜೀತ ವಿಮುಕ್ತರ ಪುನರ್ವಸತಿ ಕಾರ್ಯಕ್ರಮ ದಡಿ ರಾಜ್ಯದ ಚಿಕ್ಕಬಳ್ಳಾಪುರ ಜಿಲ್ಲೆಯ- ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಚಿಂತಾಮಣಿ,ಗುಡಿಬಂಡೆ ತಾಲ್ಲೂಕುಗಳಲ್ಲಿ 2011ರಿಂದ 2015ರವರೆಗೂ ಬಿಡುಗಡೆಯಾದಂತಹ 923 ಜೀತದಾಳುಗಳಿಗೆ ಪುನರ್ವಸತಿ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :-

1) **Credit Confirmation slip received from Finance Department, GoK for the grants released by the Centre, dated -22/8/2017.**
2) ಕೇಂದ್ರ ಸರ್ಕಾರದ ಅನುದಾನ ಬಿಡುಗಡೆ ಆದೇಶ ಸಂಖ್ಯೆ- **No.S-11011/05/1998-BL, dated- 24/7/2017**
3) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/49/ಆರ್‌ಬಿಎಲ್2016(ಭಾಗ-2), ದಿನಾಂಕ- 5/8/2017
4) ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳ, ಪ್ರಸ್ತಾವನೆ ಸಂಖ್ಯೆ- ಜಿಪಂಚಿ/ಆಡಳಿತ/ಜೀವಿಕ/ಸಿಆರ್/2016-17/984, ದಿನಾಂಕ- 2/12/2016
5) ಜಿಲ್ಲಾಧಿಕಾರಿಗಳು,ಚಿಕ್ಕಬಳ್ಳಾಪುರ ಜಿಲ್ಲೆರವರ ಪತ್ರ ಸಂಖ್ಯೆ- ಎಂ.ಎ.ಜಿ(1)/ ಸಿಆರ್/ 01/2016-17, ದಿನಾಂಕ- 21/11/2016.
6) ಸರ್ಕಾರದ ಆದೇಶ ಸಂಖ್ಯೆ- ಗ್ರಾಅಪ/11/ಆರ್‌ಬಿಎಲ್/2014, ದಿನಾಂಕ- 23/5/2015.

ಪ್ರಸ್ತಾವನೆ:-

ಕೇಂದ್ರ ಸರ್ಕಾರದ ಜೀತದಾಳುಗಳ ಪುನರ್ವಸತಿ ಯೋಜನೆಯಡಿ ಜೀತ ಪದ್ಧತಿ(ರದ್ಧತಿ) ಕಾಯ್ದೆ, 1976ರನ್ವಯ ಜೀತದಾಳುಗಳನ್ನು ಜೀತ ವಿಮುಕ್ತರನ್ನಾಗಿಸಿ, ಕೇಂದ್ರ ಹಾಗು ರಾಜ್ಯ ಸರ್ಕಾರಗಳು 50:50ರ ಅನುಪಾತದಲ್ಲಿ ತಲಾ ರೂ 10,000/- ದಂತೆ ಬಿಡುಗಡೆಗೊಂಡ ಪ್ರತಿ ಜೀತದಾಳಿಗೆ ಒಟ್ಟು ರೂ.20,000/-ಗಳ ಪುನರ್ವಸತಿ ಅನುದಾನ ನೀಡಿ, ರಾಜ್ಯ ಸರ್ಕಾರದ ವಿವಿಧ ಯೋಜನೆಯಡಿ ಆದ್ಯತಾನುಸಾರ ಅರ್ಹ ಜೀತದಾಳುಗಳಿಗೆ ಸೌಲಭ್ಯ ವಿಸ್ತರಿಸುವ ಉದ್ದೇಶವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ 5ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾಧಿಕಾರಿಗಳು 2011ರಿಂದ 2015ರವರೆಗೂ ಜಿಲ್ಲೆಯ- ಬಾಗೇಪಲ್ಲಿ, ಗುಡಿಬಂಡೆ,ಚಿಕ್ಕಬಳ್ಳಾಪುರ ಹಾಗೂ ಚಿಂತಾಮಣಿ ತಾಲ್ಲೂಕುಗಳಲ್ಲಿ ಬಿಡುಗಡೆಯಾದಂತಹ 923 ಜೀತದಾಳುಗಳ ಮಾಹಿತಿಯನ್ನು ಪೂರಕ ದಾಖಲಾತಿ ಹಾಗೂ ದೃಢೀಕರಣದೊಂದಿಗೆ ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಬಿಡುಗಡೆಯಾದಂತಹ 923 ಜೀತದಾಳುಗಳ ಪೈಕಿ- 784 ಜೀತದಾಳುಗಳು ಪರಿಶಿಷ್ಠ ಜಾತಿಗೆ ಸೇರಿರುತ್ತಾರೆ, 98 ಪರಿಶಿಷ್ಠ ಪಂಗಡಕ್ಕೆ ಹಾಗೂ ಉಳಿದ 41 ಜೀತದಾಳುಗಳು ಸಾಮಾನ್ಯ ವರ್ಗಕ್ಕೆ ಸೇರಿರುತ್ತಾರೆ. ಒಟ್ಟಾರೆ- 880 ಪುರುಷರು ಹಾಗೂ 43 ಮಹಿಳೆಯರು ಜೀತವಿಮುಕ್ತರಾಗಿರುತ್ತಾರೆಂದು ತಿಳಿಸಿ, ಇವರುಗಳಿಗೆ ಪುನರ್ವಸತಿ ಕಲ್ಪಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ 4ರಲ್ಲಿ ಇದೇ ಪ್ರಸ್ತಾವನೆಯನ್ನು ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿರವರು ಸಹಾ ಸರ್ಕಾರಕ್ಕೆ ಕಳುಹಿಸಿ , ಸದರಿ ಜೀತದಾಳುಗಳಿಗೆ ರಾಜ್ಯ ಸರ್ಕಾರದ ಜೀತವಿಮುಕ್ತರ ಸಹಾಯಧನ ಯೋಜನೆಯಡಿ ಸಹಾಯಧನವನ್ನು ಹಾಗೂ ಕೇಂದ್ರ ಸರ್ಕಾರದ ಜೀತದಾಳುಗಳ ಪುನರ್ವಸತಿ ಯೋಜನೆಯಡಿ ಪುನರ್ವಸತಿ ಅನುದಾನವನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಕಳುಹಿಸಿರುತ್ತಾರೆ.

ಮೇಲೆ ಓದಲಾದ 3ರಲ್ಲಿ 923 ಜೀತದಾಳುಗಳಿಗೆ ರಾಜ್ಯ ಸರ್ಕಾರ ಪ್ರಾಯೋಜಿತ ಜೀತದಾಳುಗಳ ಸಹಾಯಧನವಾದ ರೂ 66.45ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಇದೀಗ ಕೇಂದ್ರ ಪುರಸ್ಕೃತ ಜೀತದಾಳುಗಳ ಪುನರ್ವಸತಿ ಯೋಜನೆಯಡಿ ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ.

ಕೇಂದ್ರ ಪುರಸ್ಕೃತ ಯೋಜನೆಯಡಿ ಮೇಲೆ ಓದಲಾದ-2ರ ಕೇಂದ್ರ ಸರ್ಕಾರದ ಆದೇಶದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ 923 ಜೀತದಾಳುಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಪಾಲನ್ನು ಅಂದರೆ ರೂ 92.30ಲಕ್ಷಗಳನ್ನು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುತ್ತದೆ. ಇದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರವು ಸದರಿ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2230-01-101-0-01-300(2230-01-198-6-01-300)ರಡಿ ನಿಗದಿಯಾಗಿರುವ ರೂ 422.00 ಲಕ್ಷಗಳ ಪೈಕಿ( ಕೇಂದ್ರ- 171.00 ಲಕ್ಷ, ರಾಜ್ಯ 251.00 ಲಕ್ಷ) ರೂ 92.30 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಪ್ರಯುಕ್ತ ಈ ಆದೇಶ

<u>ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/49/ಆರ್‌ಬಿಎಲ್/2016/ಭಾಗ-2, ಬೆಂಗಳೂರು,</u>
<u>ದಿನಾಂಕ-5/9/2017.</u>

ಕೇಂದ್ರ ಪುರಸ್ಕೃತ ಜೀತದಾಳುಗಳ ಪುನರ್ವಸತಿ ಯೋಜನೆಯಡಿ 2011ರಿಂದ 2015ರವರೆಗೂ ಚಿಕ್ಕಬಳ್ಳಾಪುರ ಜಿಲ್ಲೆಯ- ಬಾಗೇಪಲ್ಲಿ, ಗುಡಿಬಂಡೆ, ಚಿಕ್ಕಬಳ್ಳಾಪುರ ಹಾಗೂ ಚಿಂತಾಮಣಿ ತಾಲ್ಲೂಕುಗಳಲ್ಲಿ ಬಿಡುಗಡೆಯಾದಂತಹ ಜೀತದಾಳುಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 50:50ರ ಅನುಪಾತದಲ್ಲಿ ಪ್ರತಿ ಜೀತದಾಳಿಗೆ ರೂ 20,000/- ದಂತೆ 923 ಜೀತದಾಳುಗಳಿಗೆ ಪುನರ್ವಸತಿ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆ 2230-01-101-0-01-300 (ಲಿಂಕ್- 2230-ಕಾರ್ಮಿಕ ಮತ್ತು ಉದ್ಯೋಗ -01-ಕಾರ್ಮಿಕ-198-ಗ್ರಾಮ ಪಂಚಾಯಿತಿಗಳಿಗೆ ಸಹಾಯ-6-ಗ್ರಾಮ ಪಂಚಾಯಿತಿಗಳು-ಕೇಂದ್ರ ಪುರಸ್ಕೃತ ಯೋಜನೆ(ಜೀತದಾಳುಗಳ ಪುನರ್ವಸತಿ)-01-ಬ್ಲಾಕ್ ಅನುದಾನ-300- **Lumpsum**) ರಡಿ ರೂ 184.60 ಲಕ್ಷಗಳನ್ನು ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

ಈ ಯೋಜನೆಗೆ ತಗಲುವ ರೂ 184.60 ಲಕ್ಷಗಳ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2230-00-101-0-01-300 ರಿಂದ ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿಗೆ ಜಮಾ ಮಾಡತಕ್ಕದ್ದು. ಈ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಜೀತವಿಮುಕ್ತರಿಗೆ ಪುನರ್ವಸತಿ ಕಲ್ಪಿಸುವ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳಬೇಕು.

<u>ಷರತ್ತುಗಳು:</u>

1. 923 ಜೀತವಿಮುಕ್ತರು ಈ ಹಿಂದೆ ಜೀತದಾಳುಗಳಾಗಿದ್ದು, ಇವರುಗಳನ್ನು ಜೀತಕ್ಕಿರಿಸಿಕೊಂಡ ಮಾಲೀಕ ರನ್ನು ಜೀತದಳುಗಳ ಪದ್ಧತಿ(ರದ್ಧತಿ) ಕಾಯ್ದೆ, 1976ರಡಿ ಸೆಕ್ಷನ್ 21ರಂತೆ **Summary Trial** ಮೂಲಕ ತಪ್ಪಿತಸ್ಥ ಮಾಲೀಕರ ಕುರಿತಂತೆ ಕ್ರಮತೆಗೆದುಕೊಳ್ಳಲಾಗುತ್ತದೆಂಬ ಬಗ್ಗೆ ದೃಢೀಕರಣವನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಪಡೆದುಕೊಂಡು ಸದರಿ ಜೀತವಿಮುಕ್ತರಿಗೆ ಪುನರ್ವಸತಿ ಕಲ್ಪಿಸುವುದು.
2. ಕೇಂದ್ರ ಸರ್ಕಾರದ ದಿನಾಂಕ-8/3/2013ರ ಆದೇಶದಲ್ಲಿ ಸೂಚಿಸಿರುವ ಮಾರ್ಗಸೂಚಿಗಳ ಅನುಸಾರ ಪುನರ್ವಸತಿ ಅನುದಾನವನ್ನು ವೆಚ್ಚ ಮಾಡತಕ್ಕದ್ದು ಹಾಗೂ ಕೇಂದ್ರ ಪುರಸ್ಕೃತ ಜೀತ ವಿಮುಕ್ತರ ಪುನರ್ವಸತಿ ಯೋಜನೆಯಡಿ ಸ್ವೀಕೃತವಾದ ಪೂರ್ಣ ಅನುದಾನಕ್ಕೆ ಪ್ರತ್ಯೇಕ ವಹಿಯನ್ನು ನಿರ್ವಹಿಸತಕ್ಕದ್ದು.
3. ಭಾರತದ ಕಂಟ್ರೋಲರ್ ಮತ್ತು ಮಹಾ ಲೇಖಪಾಲರು ಇಚ್ಚೆ ಪಟ್ಟಲ್ಲಿ ಟೆಸ್ಟ್ ಚೆಕ್‌ಗೆ ಒದಗಿಸಲು ಪ್ರತಿ ಯೋಜನೆವಾರು ವೆಚ್ಚದ ಲೆಕ್ಕ ಪತ್ರಗಳನ್ನು ಸದರಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಅವರ ಕಛೇರಿಯಲ್ಲಿ ನಿರ್ವಹಿಸತಕ್ಕದ್ದು.
4. 1976 ಜೀತ ಪದ್ಧತಿ(ರದ್ಧತಿ) ಕಾಯ್ದೆ ಹಾಗೂ ಅದರಡಿ ರೂಪಿಸಿರುವ ನಿಯಮಗಳಂತೆ ಗುರುತಿಸಿ ಜೀತಪದ್ಧತಿಯಿಂದ ಬಿಡುಗಡೆಗೊಳಿಸಲಾದ ಜೀತವಿಮುಕ್ತರಿಗೆ ಮಾತ್ರ ಈ ಯೋಜನೆಯಡಿ ಸಹಾಯ ಸೌಲಭ್ಯ

ಕಲ್ಪಿಸತಕ್ಕದ್ದು.

5. ಈ ಆದೇಶದಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ತಕ್ಷಣ ಪ್ರಸಕ್ತ ಸಾಲಿನಲ್ಲೇ ಖಜಾನೆಯಿಂದ ಸೆಳೆಯಲು ಕ್ರಮವಹಿಸಿ, ತುರ್ತಾಗಿ ಜೀತವಿಮುಕ್ತರ ಪುನರ್ವಸತಿ ಸಲುವಾಗಿ ವಿನಿಯೋಗಿಸಬೇಕು ಹಾಗೂ ಈ ಅನುದಾನವು ಯಾವುದೇ ಕಾರಣಕ್ಕೂ ವ್ಯಪಗತವಾಗಬಾರದು, ಕಾರಣ ನವೀಕರಿಸಲು ಅವಕಾಶವಿರುವುದಿಲ್ಲ.
6. ಪುನರ್ ವಸತಿ ಅನುದಾನವನ್ನು ಜೀತವಿಮುಕ್ತರಿಗೆ ವಿತರಿಸುವ ಸಮಯದಲ್ಲಿ ಮೇಲೆ ಓದಲಾದ-6ರ ಸರ್ಕಾರದ ಆದೇಶದ ಮಾರ್ಗಸೂಚಿಯನ್ವಯವೇ ಕಡ್ಡಾಯವಾಗಿ ವಿತರಿಸಬೇಕು.(ಸರ್ಕಾರಿ ಆದೇಶದ ಮಾರ್ಗಸೂಚಿ ಕ್ರಮ ಸಂಖ್ಯೆ- 5,6 ಮತ್ತು 7) ಹಾಗೂ ಈ ಸಂಬಂಧ ಸಂಬಂಧಿಸಿದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಕಾಧಿಕಾರಿಗಳು ಅಗತ್ಯ ಕ್ರಮ ವಹಿಸತಕ್ಕದ್ದು.
7. ವೆಚ್ಚ ಮಾಡಲಾದ ಅನುದಾನಕ್ಕೆ ಫಲಾನುಭವಿವಾರು ವಿವರ, ಹಣ ಬಳಕೆ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಲಾದ ತಖ್ತೆಗಳನ್ನು ಸರ್ಕಾರಕ್ಕೆ 15 ದಿನಗಳೊಳಗಾಗಿ ತಪ್ಪದೇ ಕಳುಹಿಸತಕ್ಕದ್ದು. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಪ್ರತಿ ಮಾಹೆಯೂ ಭೌತಿಕ ಹಾಗೂ ಆರ್ಥಿಕ ಪ್ರಗತಿ ವರದಿಗಳನ್ನು ಹಾಗೂ ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ನಿಗಧಿ ಪಡಿಸಿದ ಹಕ್ಕುಗಳ ನಮೂನೆಯಲ್ಲಿಯೇ ಅರ್ಧ ವಾರ್ಷಿಕ ಪ್ರಗತಿ ವರದಿಗಳನ್ನು ನಿಯತಕಾಲಿಕವಾಗಿ ತಪ್ಪದೇ ನಿರ್ದೇಶಕರು, ಗ್ರಾಮೂಸೌ-2, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರಿಗೆ ಕಳುಹಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಅನುಮತಿ ಸಂಖ್ಯೆ ಆಇ/251/ವೆಚ್ಚ-6/2017, ದಿನಾಂಕ 30/8/2017ರ ಸಹಮತಿಯನ್ವಯವೇ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್.ಕೃಷ್ಣಪ್ಪ ಕೋಡಿಪಾಳ್ಯ)
ನಿರ್ದೇಶಕರು (ಗ್ರಾ.ಮೂ.ಸೌ-2) ಹಾಗೂ
ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**karsgsy@gmail.com Ph.No.080-22353852**

ಗೆ : ಮಾಹಿತಿ ಹಾಗೂ ಅವಶ್ಯ ಕ್ರಮಕ್ಕಾಗಿ : ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.

ಇವರಿಗೆ, ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರುರವರಿಗೆ ಈ ಆದೇಶವನ್ನು ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ.

ಪ್ರತಿಯನ್ನು:

1. ಪ್ರಧಾನ ಲೇಖಪಾಲರು, ಕರ್ನಾಟಕ, ಬೆಂಗಳೂರು
2. ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ.
3. ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
4. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ.
5. ಮುಖ್ಯ ಲೆಕ್ಕಾಧಿಕಾರಿ. ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
6. ಉಪ ಕಾರ್ಯದರ್ಶಿ,ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
7. ಕಾರ್ಯನಿರ್ವಾಹಕಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಬಾಗೇಪಲ್ಲಿ/ಗುಡಿಬಂಡೆ/ಚಿಕ್ಕಬಳ್ಳಾಪುರ/ಚಿಂತಾಮಣಿ

ತಾಲ್ಲೂಕು

8. ನಿರ್ದೇಶಕರು ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ಬೆಂಗಳೂರು.
9. ಉಪನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಾಹಣಾ ಕೇಂದ್ರ, ಖನಿಜ ಭವನ,ಬೆಂಗಳೂರು
10. ಜಿಲ್ಲಾ ಖಜಾನಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ.
11. ವಿಶೇಷಾಧಿಕಾರಿಗಳು(ಜಿ.ಪಂ), ಆರ್ಥಿಕ ಇಲಾಖೆ, ವೆಚ್ಚ-6, ವಿಧಾನ ಸೌಧ , ಬೆಂಗಳೂರು
12. ಆಂತರಿಕ ಆರ್ಥಿಕ ಸಲಹೆಗಾರರು/ನಿರ್ದೇಶಕರು ಯೋಉಮಾ ವಿಭಾಗ, ಪ್ರಧಾನ ಸಂಪಾದಕರು, ಕರ್ನಾಟಕ ವಿಕಾಸ, ನಿರ್ದೇಶಕರು, ಗಣಕ ಕೋಶ-ಇಲಾಖಾ ತಂತ್ರಾಂಶದಲ್ಲಿ ಪ್ರಕಟಿಸಲು ಕೋರಿ, ಗ್ರಾಅಪ ಇಲಾಖೆ.
13. ಸರ್ಕರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ, ಗ್ರಾಅಪ ಇಲಾಖೆ.